ಅಬಕಾರಿ ಇಲಾಖೆಯ ಸಿ.ಎಲ್. ಹೋಲ್‌ಸೇಲ್ ಲೈಸೆನ್ಸ್ ಬಗ್ಗೆ

೧೫೮೧. ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಸಿ. ಎಲ್-೨ ಲೈಸನ್ಸ್ ನೀಡುವುದನ್ನು ನಿಲ್ಲಿಸಿದೆಯೆ ?

ಆ) ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ನಿಲ್ಲಿಸಲಾಗಿದೆ ?

ಇ) ೧೯೮೭-೮೮ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಯಾರು ಯಾರಿಗೆ ಸಿ.ಎಲ್-೨ ಮತ್ತು ಹೋಲ್‌ಸೇಲ್ ಪರವಾನಿಗೆ ನೀಡಿದ್ದಾರೆ (ವಿವರ ಕೊಡುವುದು) ?

ಶ್ರೀ ಡಿ.ಬಿ. ಇನಾಂದಾರ್ (ಅಬಕಾರಿ ಸಚಿವರು).—

ಅ) ಹೌದು

ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ೧೯೮೭-೮೮ನೇ ಸಾಲಿಗೆ ಹೊಸದಾಗಿ ಸಿ.ಎಲ್-೨ ಲೈಸನ್ಸ್ ನೀಡುವುದನ್ನು ನಿಲ್ಲಿಸಿದೆ.

ಇ) ೧೯೮೭-೮೮ರ ಸಾಲಿನಲ್ಲಿ ಹೊಸದಾಗಿ ಸಿ.ಎಲ್. ೨ ಪರವಾನಗೆಗಳನ್ನು ಮೈಸೂರು ಜಿಲ್ಲೆಯಲ್ಲಿ ನೀಡಿರುವುದಿಲ್ಲ. ಸಗಟು ಪರವಾಗಿ (ಸಿ.ಎಲ್. ೧)ಯನ್ನು ಮಂಜೂರಾತಿ ನೀಡಿರುವ ವಿವರವನ್ನು ಪಟ್ಟಿಯಲ್ಲಿ ಕೊಡಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ೧೯೮೭-೮೮ನೇ ಸಾಲಿಗೆ ಈ ಕೆಳಕಂಡ ವ್ಯಕ್ತಿ ಸಂಸ್ಥೆಗಳಿಗೆ ಸಿ.ಎಲ್-೧ ಸನ್ನದುಗಳನ್ನು (ಸಗಟು ಮದ್ಯದ) ಮಂಜೂರು ಮಾಡಿದ್ದು ಅವರ ವಿಳಾಸ ಈ ಕೆಳಕಂಡಂತೆ ಇರುತ್ತದೆ

೧) ವಿಜಯ ವೈನ್ ಸ್ಟೋರ್ಸ್,
ನಂ. ೧೩೮೪, ಕಬೀರ್ ರಸ್ತೆ,
ಮೈಸೂರು.

೨) ಶ್ರೀ ಕೆ. ರಾಜಶೇಖರ್
ಶ್ರೀ ಚಾಮುಂಡೇಶ್ವರಿ ಏಜೆನ್ಸೀಸ್
ನಂ. ೨೨೦೩-೪೫ ಎ,
ಸ್ಯೂ ಸಯ್ಯಾಜಿರಾವ್ ರಸ್ತೆ,
ಮೈಸೂರು.

೩) ಶ್ರೀ ಆರ್. ನಾಗರಾಜ,
ನಂ. ೪೭೨೦, ಎನ್. ಆರ್ ಮೊಹಲ್ಲಾ
ಮೈಸೂರು.

೪) ಶ್ರೀ ಆರ್. ಗಣೇಶಪ್ರಸಾದ್,
ನಂ. ೨೭೪, ಬೆಂಕಿ ನವಾಬ್ ರಸ್ತೆ,
ಮೈಸೂರು.

೫) ಶ್ರೀ ಕೆ. ಟಿ. ಸುದರ್ಶನ್
ಮೆ. ಸೋನಾ ಸೇಲ್ಸ್ ಕಾರ್ಪೊರೇಷನ್
ನಂ, ೭೫-೧೪೩, ನ್ಯೂ ಸಂತೇಪೇಟೆ,
ಮೈಸೂರು.

೬) ಶ್ರೀ ಕೆ. ಪ್ರಸಾದ್, ಅಜಂತ ವೈನ್ಸ್
ಎಂ. ಹೆಚ್. ರಸ್ತೆ, ನಂ. ೧೭೮೨
ಮೈಸೂರು.

೭) ಶ್ರೀ ಬಿ. ಸಿ. ಶಂಕರ್
ನಟರಾಜ್ ಎಂಟರ್‌ಪ್ರೈಸಸ್
೩೨೭೭, ಎ-೧, ಚಿಕ್ಕವೀರಣ್ಣ ರಸ್ತೆ
ಮೈಸೂರು.

೮) ಶ್ರೀ ಶೌಕತ್ ಮಲ್ಲಿಕ್, ಶ್ರೀನಿವಾಸ ವೈನ್ಸ್
ನಂ. ೧೭೧೦, ಬಿ. ಎನ್. ಸ್ಟ್ರೀಟ್,
ಮಂಡಿಮೊಹಲ್ಲಾ, ಮೈಸೂರು,

೯) ಶ್ರೀ ವಿ. ಗೋಪಾಲಸ್ವಾಮಿ
ನಂ. ೧೩-೧೦, ದೊಡ್ಡ ಸಯ್ಯಾಜಿರಾವ್ ರಸ್ತೆ
ಮೈಸೂರು.

೧೦) ಶ್ರೀ ಹೆಚ್. ಎಸ್ ಸೋಮಶೇಖರ್,
ಕರ್ನಾಟಕ ಹೋಟಲ್‌ಸೇಲ್ ವೈನ್ಸ್,
ನಂ. ೮೭೦ ೧೪ ಅಂಡ್ ೩೫ ಆಫ್ ಬ್ಲಾಕ್,
ಕುವೆಂಪುನಗರ, ಮೈಸೂರು.

೧೧) ಶ್ರೀ ಕೆ. ಶ್ರೀನಿವಾಸ,
ಸ್ವಪ್ನ ಹೋಲ್‌ಸೇಲ್ ವೈನ್ಸ್,
ನಂ. ೨೫೮೭, ಎಂ.ಜಿ.ರಸ್ತೆ, ನಂಜನಗೂಡು

೧೨) ಶ್ರೀ ಟಿ. ಶಿವಕುಮಾರ್
ಲಕ್ಷ್ಮಿ ವೈನ್ಸ್, ನಂ. ೧೮೫೬-೧೫೭೮,
ಬಸವೇಶ್ವರ ಬ್ಲಾಕ್, ಕೆ.ಆರ್. ನಗರ.

೧೩) ಶ್ರೀ ಪಿ. ಚಿಕ್ಕಲಿಂಗೇಗೌಡ
ಲೀಲ ವೈನ್ಸ್, ದಕ್ಷಿಣ ಬಡಾವಣೆ
ನಂ. ೭೨೫೨-ಸಿ, ಕೊಳ್ಳೇಗಾಲ
ಮೈಸೂರು ಜಿಲ್ಲೆ.

೧೪) ಶ್ರೀ ಜಿ. ಸಿ. ಶಿವಕುಮಾರ್
ಪಾಲುದಾರರು, ನಂ. ೩೨೦೮, ಎಂ-೧೭
ಮಳಿಗೆ ಸಂಖ್ಯೆ, ೫೦ ಈಡಿಗ ಬಡಾವಣೆ
ಮಂಡಿಮೊಹಲ್ಲಾ, ಮೈಸೂರು.

ಮೈಸೂರು ನಗರದ ಕೃಷ್ಣ ಪ್ಯಾಲೇಸ್ ಖಾಸಗಿ ಸಂಸ್ಥೆಯಲ್ಲಿ ಹಣ ವಸೂಲು ಮಾಡುವ ಬಗ್ಗೆ

೧೫೪೦. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಕುವೆಂಪು ನಗರದಲ್ಲಿರುವ ಕೃಷ್ಣ ಪಾಲೇಸ್ ಎಂಬ ಖಾಸಗಿ ಸಂಸ್ಥೆಯು ಸಾರ್ವಜನಿಕರಿಂದ ವಸೂಲು ಮಾಡಿದ ಹಣವೆಷ್ಟು ?

ಆ) ಈ ಹಣವನ್ನು ವಸೂಲು ಮಾಡಲು ಕಾನೂನಿನ ಪ್ರಕಾರ ಅವರು ರಹದಾರಿ ಪಡೆದಿರುತ್ತಾರೆಯೇ ?

ಇ) ಸಾರ್ವಜನಿಕರಿಗೆ ವಂಚಿಸಿ ಮುಚ್ಚಿರುವ ಈ ಸಂಸ್ಥೆಯ ಮೇಲೆ ಪೋಲೀಸ್ ಇಲಾಖೆಯು ಕೈಗೊಂಡಿರುವ ಕ್ರಮವೇನು ?